ವಿಜಯವಾಣಿ ನಂ 1

## ಗ್ರಂಥ ಬಿಡುಗಡೆಗೊಳಿಸಿದ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ

# ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಬೆಳೆಸಲಿ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಸಮಾಜದಲ್ಲಿ ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಸಂಸ್ಕಾರ ಬೆಳೆಸಬೇಕು. ಈ ನಿಟ್ಟಿನಲ್ಲಿ ಪ್ರೊ. ಕಲ್ಲೋಳಿಕರ ಅವರು ಸಮಾಜಕ್ಕೆ ಮತ್ತು ವಿದ್ಯಾರ್ಥಿಗಳಿಗೆ ನೀಡಿದ ಕೊಡುಗೆ ಗಮನಾರ್ಹ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ಕರ್ನಾಟಕ ವಿವಿಯ ಸುವರ್ಣ ಮಹೋತ್ಸವ ಭವನದಲ್ಲಿ ಶನಿವಾರ ಆಯೋಜಿಸಿದ್ದ ಪ್ರೊ. ಶಿವರುದ್ರ ಕಲ್ಲೋಳಿಕರ ಗೌರವ ಅಭಿನಂದನೆ ಹಾಗೂ 'ಅಕ್ಷರ' ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಂಪಿ ಕನ್ನಡ ವಿವಿಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲಿಕಾ ಘಂಟಿ ಮಾತನಾಡಿ, ಶಿವರುದ್ರ ಕಲ್ಲೋಳಿಕರ ಉತ್ತಮ ಶಿಕ್ಷಕರಾಗಿ, ಚಳವಳಿ ಮತ್ತು ಸಾಹಿತ್ಯದ ಮೂಲಕ ಜನರಲ್ಲಿ ಅರಿವು ಮೂಡಿಸುವ ಕಾರ್ಯ ಕೈಗೊಂಡಿದ್ದು ಶ್ಲಾಘನೀಯ ಎಂದರು.

ಅಭಿನಂದನೆ ಸ್ವೀಕರಿಸಿದ ಪ್ರೊ. ಶಿವರುದ್ರ ಕಲ್ಲೋಳಿಕರ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿ ಪ್ರಾಧ್ಯಾಪಕರೊಂದಿಗಿನ ಒಡನಾಟ ಸ್ಫೂರ್ತಿ ತುಂಬಿತು.



ವಿಜಯವಾಣಿ ಚಿತ್ರ

ಧಾರವಾಡ ಕರ್ನಾಟಕ ವಿವಿಯ ಸುವರ್ಣ ಮಹೋತ್ಸವ ಭವನದಲ್ಲಿ ಶನಿವಾರ ಆಯೋಜಿಸಿದ್ದ ಪ್ರೊ. ಶಿವರುದ್ರ ಕಲ್ಲೋಳಿಕರ ಗೌರವ ಅಭಿನಂದನೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು 'ಅಕ್ಷರ' ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಿದರು. ಶಾಸಕರಾದ ಅರವಿಂದ ಬೆಲ್ಲದ, ಪ್ರಸಾದ್ ಅಬ್ಬಯ್ಯ, ಪ್ರೊ. ಮಲ್ಲಿಕಾ ಘಂಟಿ, ಪ್ರೊ. ಶಿವರುದ್ರ ಕಲ್ಲೋಳಿಕರ, ಕುಲಪತಿ ಪ್ರೊ. ಕೆ.ಬಿ. ಗುಡಸಿ, ಡಾ. ಸರಜು ಕಾಟ್ಕರ್, ಪ್ರೊ. ಬಿ.ಆರ್. ಕಾಂಬಳೆ, ಡಾ. ಸುಭಾಷ ನಾಟೀಕರ ಇತರರಿದ್ದರು.

ವಿದ್ಯಾರ್ಥಿಗಳು ಮತ್ತು ವಿಭಿನ್ನ ಆಲೋಚನೆಯ ಪ್ರಾಧ್ಯಾಪಕರ ಒಡನಾಟ ನಿರಂತರವಾಗಿತ್ತು. ಬಾಲಕನಾಗಿದ್ದಾಗ ತಂದೆ ನೀಡುತ್ತಿದ್ದ ಶಿಕ್ಷೆ ಶಿಕ್ಷಣಕ್ಕೆ ದಾರಿದೀಪವಾಯಿತು. ಜೀವನದಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆದಿದ್ದೇನೆ ಎಂದರು.

ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ 'ಅಕ್ಷರ' ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಿದರು. ಶಾಸಕರಾದ ಅರವಿಂದ ಬೆಲ್ಲದ, ಪ್ರಸಾದ್ ಅಬ್ಬಯ್ಯ, ಡಾ. ಸರಜು ಕಾಟ್ಕರ್, ಪ್ರೊ. ಬಿ.ಆರ್. ಕಾಂಬಳೆ, ಡಾ. ಸುಭಾಷ ನಾಟೀಕರ , ಡಾ. ಸದಾಶಿವ ಮರ್ಜಿ, ಪ್ರೊ. ಎಸ್. ರಾಜಶೇಖರ, ಚಿಂತಕ ಎಂ. ಗೋಪಿನಾಥ್, ಡಾ. ರಮೇಶ, ಕೆಪಿಎಸ್‌ಸಿ ಸದಸ್ಯ ಡಾ. ಮಹಾದೇವ ಹೆಗ್ಗನ್ನವರ, ಪ್ರೊ. ಶಿಲಾಧರ, ಅಸ್ಮಿತಾ ಶಿವರುದ್ರ ಕಲ್ಲೋಳಿಕರ, ಡಾ. ಜಗದೀಶ ಕಿವುಡನವರ, ಇತರರಿದ್ದರು.